ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕು. ಇಲ್ಲ ಎಂದು ಹೇಳಿದರೆ ಮುಂದಿನ ವಾರದಿಂದ ಮಂಗಳೂರಿನಲ್ಲಿ ರೈಲ್ವೆ ನಿಲ್ದಾಣದಲ್ಲಿ ನಾನು ಚಳುವಳಿಯನ್ನು ಪ್ರಾರಂಭ ಮಾಡುತ್ತಿದ್ದೇನೆ. ಇದನ್ನು ತಮ್ಮ ಮೂಲಕ ಸರ್ಕಾರಕ್ಕೆ ಸ್ಪಷ್ಟವಾಗಿ ನಾನು ತಿಳಿಸುತ್ತಿದ್ದೇನೆ. ದಯಮಾಡಿ ಈ ಬಗ್ಗೆ ಕೂಡಲೇ ರೈಲ್ವೆ ಸಚಿವರ ಹತ್ತಿರ ಮಾತನಾಡಿ ಈ ಅನಾನುಕೂಲ ತಪ್ಪಿಸಿ ಕನ್ನಡಿಗರಿಗೆ ಅಂಗಡಿಗಳನ್ನು ಕೊಡಬೇಕು. ಕನ್ನಡದವರಿಗೇ ಹೋಟಿಲುಗಳನ್ನು ಕೊಡಬೇಕು. ಉದ್ಯೋಗವನ್ನು ಕನ್ನಡಿಗರಿಗೇ ಕೊಡಬೇಕು ಎನ್ನತಕ್ಕ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಿ ತಕ್ಷಣ ಈ ಸದನ ಏಳುವುದರೊಳಗಾಗಿ ಅಂದರೆ ಮುಂದಿನ ಸೋಮವಾರದೊಳಗೆ ರೈಲ್ವೆ ಸಚಿವರ ಜೊತೆ ಮಾತನಾಡಿ ತಾವು ಏನು ಹೇಳುತ್ತೀರಿ ಎನ್ನುವ ಬಗ್ಗೆ ಈ ಸದನಕ್ಕೆ ಹೇಳಿಕೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಚಂದ್ರಕಾಂತ ಜಿ ಬೆಲ್ಲದ್ : ಸನ್ಮಾನ್ಯ ಅಧ್ಯಕ್ಷರೆ, ರೈಲ್ವೆ ಇಲಾಖೆಯಲ್ಲಿ ಕನ್ನಡಿಗಿರಿಗೆ ಅನ್ಯಾಯವಾಗಿದೆ.

ಅಧ್ಯಕ್ಷರು : ಈ ವಿಷಯವನ್ನು ಪ್ರಸ್ತಾಪಮಾಡುವುದಕ್ಕೆ, ಶೂನ್ಯ ವೇಳೆಯಲ್ಲಿ ಇದನ್ನು ತೆಗೆಯುತ್ತೇನೆ ಎಂದು ಬಂದು ನನ್ನ ಅನುಮತಿಯನ್ನು ಪಡೆದು ಇಲ್ಲಿ ಪ್ರಸ್ತಾಪ ಮಾಡಿದರು. ತಾವು ಯಾರು ಅಲ್ಲಿ ಬರುವುದಿಲ್ಲ, ಅದರ ಕಡೆ ಗಮನ ಕೊಡುವುದಿಲ್ಲ. ಇಲ್ಲಿ ಅವರು ಹೇಳಿದಮೇಲೆ ಎಲ್ಲರೂ ಎದ್ದುನಿಂತುಕೊಂಡರೆ ಶೂನ್ಯ ವೇಳೆಯಲ್ಲಿ ಡಿಸ್ಕಷನ್ ಇಟ್ಟುಕೊಳ್ಳುವುದಕ್ಕಾಗುತ್ತದೆಯೇ ಕುಳಿತುಕೊಳ್ಳಿ ದಯಮಾಡಿ. ಸೀರಿಯಸ್‌ನೆಸ್ ಇದ್ದರೆ ಮೊದಲೇ ಬಂದು ತಿಳಿಸಬೇಕು. ಅಥವಾ ಬೇರೆ ರೂಪದಲ್ಲಿ ತನ್ನಿ. ಉತ್ತರ ಕೊಡುತ್ತಾರೆ. ಈಗ ದಯಮಾಡಿ ಕುಳಿತುಕೊಳ್ಳಿ.

ಕುಂದಾಪುರ ತಾಲ್ಲೂಕು ಎಡ್ಯಾಡಿ, ಮತ್ಯಾಡಿ ಗ್ರಾಮದ ಗುಡ್ಡೆಟ್ಟು ಎಂಬ ಸ್ಥಳದಲ್ಲಿ ಅಕ್ರಮ ಶರಾಬು

ಶ್ರೀ ಜೆ.ಎಚ್. ಪಟೇಲ್ : ಮಾನ್ಯ ಅಧ್ಯಕ್ಷರೆ ಸನ್ಮಾನ್ಯ ಸದಸ್ಯರು ಹೇಳಿರತಕ್ಕಂತಹ ವಿಷಯವನ್ನು ಬಹಳ ಗಂಭೀರತೆಯಿಂದ ನಾವು ಪರಿಶೀಲಿಸುತ್ತೇವೆ ಸಾಧ್ಯವಾದರೆ, ಒಂದೆರಡು ದಿವಸಗಳೊಳಗೆ ರೈಲ್ವೆ ಮಂತ್ರಿಗಳ ಜೊತೆ ಸಂಪರ್ಕ ಮಾಡಿ, ಈ ರೀತಿ ಕನ್ನಡಿಗಿರಗೆ ಅನ್ಯಾಯವಾಗುತ್ತದದೆತ ಏಕೆಂದರೆ ರೈಲ್ವೇ ಮಂತ್ರಿಗಳು ಕರ್ನಾಟಕದವರು, ಅವರ ಗಮನ ಸೆಳೆಯುತ್ತೇನೆ. ಈ ಬಗ್ಗೆ ಸರಿಪಡಿಸುವುದಕ್ಕೂ ಕೇಳಿಕೊಳ್ಳುತ್ತೇನೆ. ಅಲ್ಲಿಗೂ ಅವರು ಸರಿ ಮಾಡದಿದ್ದರೆ ಏಕೆಂದರೆ, ಆಫೀಸರ್ಸ್ ಲೆವಲ್‌ನಲ್ಲಿ ಏನೇನು ನಡೆದಿರುತ್ತದೆಯೋ ಗೊತ್ತಿಲ್ಲ, ಅಲ್ಲಿಗೂ ಅದು ಸರಿ ಹೋಗಲಿಲ್ಲ ಅಂದರೆ, ಮಾನ್ಯ ಸದಸ್ಯರು ಚಳುವಳಿ ಮಾಡುವುದು ಸರಿ.

ಗಮನ ಸೆಳೆಯುವ ಸೂಚನೆಗಳು

ಕುಂದಾಪುರ ತಾಲ್ಲೂಕು ಎಡ್ಯಾಡಿ, ಮತ್ಯಾಡಿ ಗ್ರಾಮದ ಗುಡ್ಡೆಟ್ಟು ಎಂಬ ಸ್ಥಳದಲ್ಲಿ ಅಕ್ರಮ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಕುಂದಾಪುರ ತಾಲ್ಲೂಕು ಎಡ್ಯಾಡಿ, ಮತ್ಯಾಡಿ ಗ್ರಾಮಗಳಲ್ಲಿ ಅಕ್ರಮ ದೊರೆಯುತ್ತಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಕೊಡುತ್ತೇನೆ.